# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ | 991 (1049) |
| ಮಾನ್ಯ ಸದಸ್ಯರ ಹೆಸರು | ಶ್ರೀ ಕೆ. ವಿವೇಕಾನಂದ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ಸಚಿವರು | ಅಬಕಾರಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 12.03.2026 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಶಾಲಾ ಕಾಲೇಜಿನ ವ್ಯಾಪ್ತಿಯಲ್ಲಿ ನಿಯಮಾವಳಿ ಮೀರಿ ವೈನ್ ಸ್ಟೋರ್ ಗಳು ನಡೆಯುತ್ತಿರುವ ಬಗ್ಗೆ ಸರ್ಕಾರದಲ್ಲಿ ಯಾವುದಾದರು ಮಾಹಿತಿ ಇದೆಯೇ;(ಇದ್ದಲ್ಲಿ ವಿವರ ನೀಡುವುದು) | ಕರ್ನಾಟಕ ಅಬಕಾರಿ(ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು,1967 ರ ನಿಯಮ 5ರಡಿಯಲ್ಲಿ ವ್ಯಾಖ್ಯಾನಿಸಿರುವಂತೆ, ಯಾವುದೇ ಅಬಕಾರಿ ಸನ್ನದುಗಳು ಶೈಕ್ಷಣಿಕ ಸಂಸ್ಥೆಗಳಿಂದ 100 ಮೀಟರ್ ಅಂತರದೊಳಗೆ ಕಾರ್ಯನಿರ್ವಹಿಸುವಂತಿಲ್ಲ.<br><br>ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967 ರ ನಿಯಮ 5(2) ರಡಿ ನಗರ ಸಭೆ ಮತ್ತು ಮಹಾನಗರ ಪಾಲಿಕೆ ವ್ಯಾಪ್ತಿಗಳಲ್ಲಿ ಯಾವುದೇ ಅಬಕಾರಿ ಸನ್ನದುಗಳು ಇದೇ ನಿಯಮ 5(1) ರಲ್ಲಿ ಉಲ್ಲೇಖಿಸಿರುವ ಶೈಕ್ಷಣಿಕ ಸಂಸ್ಥೆಗಳು, ಧಾರ್ಮಿಕ ಸಂಸ್ಥೆಗಳು, ಆಸ್ಪತ್ರೆಗಳು ಅಥವಾ ವಸತಿ ಪ್ರದೇಶಗಳು, ರಾಜ್ಯ ಸರ್ಕಾರದ/ಕೇಂದ್ರ ಸರ್ಕಾರದ ಕಛೇರಿಗಳಿಂದ 50 ಮೀಟರ್ ಗಿಂತ ಮೇಲ್ಪಟ್ಟು 100 ಮೀಟರ್ ಅಂತರದೊಳಗೆ ಕಾರ್ಯನಿರ್ವಹಿಸುತ್ತಿದ್ದಲ್ಲಿ, ಅಂತಹ ಸನ್ನದುಗಳಿಗೆ ವಿನಾಯಿತಿ ನೀಡುವ ಅಧಿಕಾರ ಅಬಕಾರಿ ಆಯುಕ್ತರಿಗೆ ಪ್ರದತ್ತವಾಗಿರುತ್ತದೆ.<br><br>ಸರ್ಕಾರದ ಅಧಿಸೂಚನೆ ಸಂಖ್ಯೆ:ಎಫ್ ಡಿ/11/ಪಿಇಎಸ್/2015 ದಿನಾಂಕ: 19/05/2017 ರಂತೆ ದಿನಾಂಕ: 01/07/2016 ರ ದಿನಾಂಕದವರೆಗೆ ನವೀಕರಣಗೊಂಡು ಅಸ್ತಿತ್ವದಲ್ಲಿದ್ದ ಸನ್ನದುಗಳಿಗೆ 100 ಮೀಟರ್ ಅಂತರದೊಳಗೆ ಧಾರ್ಮಿಕ ಸಂಸ್ಥೆ ಅಥವಾ ಶೈಕ್ಷಣಿಕ ಸಂಸ್ಥೆ ಅಥವಾ ಆಸ್ಪತ್ರೆ ಅಥವಾ ಯಾವುದೇ ರಾಜ್ಯ ಸರ್ಕಾರಿ ಅಥವಾ ಕೇಂದ್ರ ಸರ್ಕಾರಿ ಅಥವಾ ಸ್ಥಳೀಯ ಸಂಸ್ಥೆಗಳು ಇದ್ದಲ್ಲಿ, ಅವುಗಳನ್ನು ಆಕ್ಷೇಪಣಾ ಸ್ಥಳವೆಂದು ಪರಿಗಣಿಸಲು ವಿನಾಯಿತಿ ಇರುತ್ತದೆ.<br><br>ಸರ್ಕಾರದ ಅಧಿಸೂಚನೆ-I ಸಂಖ್ಯೆ:ಎಫ್ ಡಿ/9/ಪಿಇಎಸ್/2022, ದಿನಾಂಕ:16-08-2024 ರಲ್ಲಿ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967 ರ ನಿಯಮ 5ರ ಉಪ ನಿಯಮ 4(ಬಿ) |

| | | |
|---|---|---|
| | | ರನ್ವಯ ಸನ್ನದು ನೀಡಿದ ನಂತರ ಯಾವುದೇ ಧಾರ್ಮಿಕ ಸಂಸ್ಥೆ ಅಥವಾ ಶೈಕ್ಷಣಿಕ ಸಂಸ್ಥೆ ಅಥವಾ ಆಸ್ಪತ್ರೆ ಅಥವಾ ಯಾವುದೇ ರಾಜ್ಯ ಸರ್ಕಾರಿ ಅಥವಾ ಕೇಂದ್ರ ಸರ್ಕಾರಿ ಅಥವಾ ಸ್ಥಳೀಯ ಸಂಸ್ಥೆಗಳು ಸ್ಥಾಪನೆಯಾದಲ್ಲಿ ಮೈಕ್ರೋಬ್ರೀವರಿ ಸನ್ನದು, ನಮೂನೆ ಸಿಎಲ್-4, ನಮೂನೆ ಸಿಎಲ್-6ಎ, ನಮೂನೆ ಸಿಎಲ್-7 ಮತ್ತು ನಮೂನೆ ಸಿಎಲ್-9 ಸನ್ನದುಗಳಿಗೆ ಆಕ್ಷೇಪಣಾ ಸ್ಥಳವೆಂದು ಪರಿಗಣಿಸಲು ವಿನಾಯಿತಿ ನೀಡಲಾಗಿರುತ್ತದೆ.<br><br>ಈ ಮೇಲ್ಕಂಡ ನಿಯಮ ಹಾಗೂ ವಿನಾಯಿತಿಗಳನ್ನು ಹೊರತುಪಡಿಸಿ, ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967 ರ ನಿಯಮ 5(1) ರನ್ವಯ ಶಾಲಾ ಕಾಲೇಜುಗಳ 100 ಮೀಟರ್ ಅಂತರದೊಳಗೆ ಒಟ್ಟಾರೆಯಾಗಿ ವಿವಿಧ ರೀತಿಯ 09 ಸನ್ನದುಗಳು ಕಾರ್ಯನಿರ್ವಹಿಸುತ್ತಿರುವುದು ಕಂಡುಬಂದಿರುತ್ತದೆ.<br><br>ಆದ್ದರಿಂದ, ಸದರಿ ಸನ್ನದುಗಳನ್ನು ಕರ್ನಾಟಕ ಅಬಕಾರಿ(ಸನ್ನದುಗಳ ಸಾಮಾನ್ಯ ಷರತ್ತುಗಳು)ನಿಯಮಗಳು, 1967 ರ ನಿಯಮ 23 ರನ್ವಯ ಬೇರೊಂದು ಆಕ್ಷೇಪಣಾ ರಹಿತ ಸ್ಥಳಕ್ಕೆ ಸ್ಥಳಾಂತರಿಸಲು ಸಂಬಂಧಪಟ್ಟ ಜಿಲ್ಲೆಯ ಅಬಕಾರಿ ಉಪ ಆಯುಕ್ತರುಗಳ ಮೂಲಕ ಕ್ರಮ ವಹಿಸಲಾಗಿರುತ್ತದೆ. |
| **ಆ)** | ಇಲ್ಲವೇ, ಶಾಲಾ ಕಾಲೇಜುಗಳನ್ನು ವೈನ್ ಸ್ಟೋರ್‌ಗಳ ಬಳಿಯೇ ನಿರ್ಮಿಸಲಾಗಿದೆಯೇ: ಮಾಹಿತಿ ನೀಡುವುದು: | ಸರ್ಕಾರದ ಅಧಿಸೂಚನೆ-**I** ಸಂಖ್ಯೆ:ಎಫ್‌ಡಿ/9/ಪಿಇಎಸ್/2022, ದಿನಾಂಕ:16-08-2024 ರಲ್ಲಿ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967 ರ ನಿಯಮ 5 ರ ಉಪ ನಿಯಮ 4(ಬಿ) ರನ್ವಯ ಸನ್ನದು ನೀಡಿದ ನಂತರ ಯಾವುದೇ ಧಾರ್ಮಿಕ ಸಂಸ್ಥೆ ಅಥವಾ ಶೈಕ್ಷಣಿಕ ಸಂಸ್ಥೆ ಅಥವಾ ಆಸ್ಪತ್ರೆ ಅಥವಾ ಯಾವುದೇ ರಾಜ್ಯ ಸರ್ಕಾರಿ ಅಥವಾ ಕೇಂದ್ರ ಸರ್ಕಾರಿ ಅಥವಾ ಸ್ಥಳೀಯ ಸಂಸ್ಥೆಗಳು ಸ್ಥಾಪನೆಯಾದಲ್ಲಿ ಮೈಕ್ರೋಬ್ರೀವರಿ ಸನ್ನದು, ನಮೂನೆ ಸಿಎಲ್-4, ನಮೂನೆ ಸಿಎಲ್-6ಎ, ನಮೂನೆ ಸಿಎಲ್-7 ಮತ್ತು ನಮೂನೆ ಸಿಎಲ್-9 ಸನ್ನದುಗಳಿಗೆ ಆಕ್ಷೇಪಣಾ ಸ್ಥಳವೆಂದು ಪರಿಗಣಿಸಲು ವಿನಾಯಿತಿ ನೀಡಲಾಗಿರುತ್ತದೆ.<br><br>ಸದರಿ ವಿನಾಯಿತಿಯು ಸಿಎಲ್-2 ಮತ್ತು ಸಿಎಲ್-11 (ಸಿ) ಸನ್ನದುಗಳಿಗೆ ಅನ್ವಯಿಸುವುದಿಲ್ಲ. ಒಂದು ವೇಳೆ ಸಿಎಲ್-2 ಮತ್ತು ಸಿಎಲ್-11(ಸಿ) ಸನ್ನದುಗಳು ಅಸ್ತಿತ್ವದಲ್ಲಿದ್ದು ನಂತರ 100 ಮೀಟರ್ |

| | | |
|---|---|---|
| | | ಅಂತರದೊಳಗೆ ಯಾವುದೇ ಶಾಲಾ ಕಾಲೇಜುಗಳು ಸ್ಥಾಪಿತವಾದಲ್ಲಿ, ಸದರಿ ಸಿಎಲ್-2 ಮತ್ತು ಸಿಎಲ್-11(ಸಿ) ಸನ್ನದುಗಳನ್ನು ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967 ರ ನಿಯಮ 23 ರನ್ವಯ ಬೇರೊಂದು ಆಕ್ಷೇಪಣಾ ರಹಿತ ಸ್ಥಳಕ್ಕೆ ಸ್ಥಳಾಂತರಿಸಲು ಕ್ರಮ ವಹಿಸಲಾಗುತ್ತಿರುತ್ತದೆ. |
| ಇ) | ಶಾಲಾ ಕಾಲೇಜುಗಳನ್ನು ಆರಂಭಿಸುವ ಮುನ್ನ ಅಬಕಾರಿ ಇಲಾಖೆಯಿಂದಲೂ ನಿರಪೇಕ್ಷಣಾ ಪತ್ರ ನೀಡುವ ಪ್ರಕ್ರಿಯೆ ಜಾರಿಯಲ್ಲಿದೆಯೇ; ಇಲ್ಲವಾದಲ್ಲಿ, ಈ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ? | ಶಾಲಾ ಕಾಲೇಜುಗಳ ಕಾರ್ಯನಿರ್ವಹಣೆ ಅಬಕಾರಿ ಇಲಾಖಾ ವ್ಯಾಪ್ತಿಗೆ ಒಳಪಡದೇ ಇರುವುದರಿಂದ, ಇಂತಹ ಯಾವುದೇ ಪ್ರಕ್ರಿಯೆ ಜಾರಿಯಲ್ಲಿರುವುದಿಲ್ಲ. |

**[illegible] 30 ಜುಲೈ, 2026**

(ಆರ್.ಬಿ.ತಿಮ್ಮಾಪೂರ)
ಅಬಕಾರಿ ಸಚಿವರು